3. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮದ ನಿಗದಿಪಡಿಸುವಿಕೆ, ಇತ್ಯಾದಿ) ನಿಯಮಗಳು, 1995 ನ್ನು ರಚಿಸಲಾಗಿದ್ದು, ಅದರಲ್ಲಿ ಇತರ ವಿಷಯಗಳನ್ನೊಳಗೊಂಡಂತೆ ಜಿಲ್ಲಾ ಮಟ್ಟದ ಶಿಕ್ಷಣ ಕ್ರಮಬದ್ಧತೆ ಪ್ರಾಧಿಕಾರವನ್ನು ಸಹ ಈ ನಿಯಮಗಳಡಿ ರಚಿಸಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ನಿಯಮ 15 ನ್ನು ಈ ಕೆಳಕಂಡಂತೆ ಉದ್ದರೀಕರಿಸಿದೆ:

'15. Violation of Rules regarding admission fees, or any provisions in the Act or Rules by the Institution:

(1) Any parent who is aggrieved by:-

(c) Violation of any of the provisions of these rules with respect to admissions by the institutions;

(d) Violation of any of the provisions of these rules with respect to collection of fees;

(2) 'The District Regulationg Authority may also suomotu or on complaint made by any person interested orally or otherwise make an enquiry to satify themselves as to the correctness of the complaint and may pass orders as it may consider fit, after giving an opportunity to the party adversely affected by it an opportunity of making representation.

4. ಸರ್ಕಾರವು ಈ ವಿಚಾರವಾಗಿ ದಿನಾಂಕ 28–04–2003 ರಂದು ಸುತ್ತೋಲೆ ಸಂಖ್ಯೆ ಇಡಿ 117 ಪಿಜಿಸಿ 2003 ನ್ನು ಹೊರಡಿಸಿದೆ.

5019 (5312) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಠ್ಯಪುಸ್ತಕಗಳ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಪಠ್ಯ ಪುಸ್ತಕಗಳ ಕೊರತೆಗೆ ಕಾರಣಗಳೇನು;

ಇ) ಪ್ರತಿ ವರ್ಷ ಈ ರೀತಿಯ ಕೊರತೆಯಿಂದ ವಿದ್ಯಾರ್ಥಿಗಳ ಅಭ್ಯಾಸದಲ್ಲಿ ಕುಂಠಿತವಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಕೊರತೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) ಉಚಿತವಿತರಣೆಯ ಪಠ್ಯ ಪುಸ್ತಕಗಳಲ್ಲಿ ಯಾವುದೇ ಕೊರತೆ ಇಲ್ಲ. ಅವುಗಳನ್ನು ಶಾಲಾ ಪ್ರಾರಂಭದಲ್ಲೇ ವಿತರಿಸಲಾಗಿದೆ. ಆದರೆ ಮಾರಾಟ ವಿಭಾಗದ ಪಠ್ಯ ಪುಸ್ತಕಗಳ ಕೆಲವು ಶೀರ್ಷಿಕೆಗಳಲ್ಲಿ ಸ್ವಲ್ಪ ಕೊರತೆ ಕಂಡುಬಂದಿದೆ.

ಆ) ಮುದ್ರಣ ಕಾಗದದಕೊರತೆ: ಕನಿಷ್ಠದರದ ಅನ್ವಯ ರಾಜ್ಯದ ಮುದ್ರಕರಿಗೆ ಮುದ್ರಣವನ್ನು ನೀಡುವ ಪರಿಪಾಠ ಇತ್ಯಾದಿಗಳು.

ಇ) 1996–97ರಿಂದ 2003–04ರವರೆಗೆ ಆಯಾ ಶೈಕ್ಷಣಿಕ ವರ್ಷದ ಜುಲೈ ಅಂತ್ಯದೊಳಗೆ ಪಠ್ಯ ಪುಸ್ತಕಗಳು ದೊರಕಿವೆ:2004–05ರಲ್ಲಿ ಮಾತ್ರ ಡಿಸೆಂಬರ್‌ವರೆವಿಗೆ ವಿಳಂಬವಾಗಿದೆ. 2005–06ನೇ ಸಾಲಿನಲ್ಲಿ ಮೇ 30 ರಂದೇ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಿದೆ. ಮಾರಾಟ ವಿಭಾಗದ ಪಠ್ಯಪುಸ್ತಕಗಳ ಕೆಲವು ಶೀರ್ಷಿಕೆಗಳಲ್ಲಿ ಸ್ವಲ್ಪ ಕೊರತೆ ಉಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಮಾರಾಟ ವಿಭಾಗದ ಪಠ್ಯ ಪುಸ್ತಕಗಳ ಕೊರತೆಯನ್ನು ಸರಿದೂಗಿಸಲು ರಾಜ್ಯದಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಮಳಿಗೆಗಳಲ್ಲಿ ಉಚಿತ ವಿತರಣೆಯ ಪಠ್ಯಪುಸ್ತಕಗಳ ಪೈಕಿ ವಿತರಣೆಯಾದ ನಂತರ ಹೆಚ್ಚುವರಿಯಾಗಿ ಉಳಿದಿರುವ ಸುಮಾರು 20ಲಕ್ಷ ಪಠ್ಯಪುಸ್ತಕಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗಿದೆ. ಪುಸ್ತಕಗಳನ್ನು ತುರ್ತಾಗಿ ಮುದ್ರಿಸಿ ಬಿಡುಗಡೆ ಮಾಡುವಂತೆ ಖಾಸಗಿಮುದ್ರಕರಿಗೆ ಆದೇಶ ನೀಡಲಾಗಿದೆ.

5020 (5612) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರೋಣ ತಾಲ್ಲೂಕು ಹಾಗೂ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ;

ಆ) ಮಿನಿ ವಾಟರ್ ಟ್ಯಾಂಕ್ ಹಾಗೂ ಓವರ್ ಟ್ಯಾಂಕ್ ಸೌಲಭ್ಯಗಳನ್ನು ಹೊಂದದೆ ಇರುವ ಗ್ರಾಮಗಳು ಯಾವುವು;

ಇ) ಹಾಲಿ ಕುಡಿಯುವ ನೀರಿಗಾಗಿ ಎಷ್ಟು ಕೊಳವೆ ಬಾವಿಗಳ ಬೇಡಿಕೆ ಇದೆ, ಬೇಡಿಕೆಯನ್ನು ಯಾವ ಯಾವ ಯೋಜನೆಯಡಿ ಪೂರೈಸಲಾಗುವುದು;

ಬಿ. ಸತ್ಯನಾರಾಯಣ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. :

ಅ) ರೋಣ ತಾಲ್ಲೂಕು ವ್ಯಾಪ್ತಿಯಲ್ಲಿನ ರೋಣ ಕ್ಷೇತ್ರದಲ್ಲಿ 896 ಕೊಳವೆ ಬಾವಿಗಳನ್ನು ಹಾಗೂ ಒಟ್ಟಾರೆ ರೋಣ ಕ್ಷೇತ್ರದಲ್ಲಿ 1188 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ.

ಆ) ರೋಣ ತಾಲ್ಲೂಕು ಹಾಗೂ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಅರ್ಹ ಗ್ರಾಮಗಳಿಗೆ ಜನಸಂಖ್ಯೆ ಆಧಾರಿತ ಚಾಲ್ತಿ ಮಾರ್ಗಸೂಚಿಗಳನ್ವಯ ಈ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇ) ಹಾಲಿ ಕುಡಿಯುವ ನೀರಿಗಾಗಿ 40 ಕೊಳವೆ ಬಾವಿಗಳ ಬೇಡಿಕೆಯಿದೆ. ಈ ಬೇಡಿಕೆಗಳನ್ನು 2005–06ನೇ ಸಾಲಿನ ಕುಡಿಯುವ ನೀರಿನ ARWSP, MNP, SCP ಇತ್ಯಾದಿ ಯೋಜನೆಗಳ ಕ್ರಿಯಾ ಯೋಜನೆಯಡಿ ಪೂರೈಸಲಾಗುವುದು.

5021 (5613) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) :– ಮಾನ್ಯ ಉನ್ನತ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರೋಣ ತಾಲ್ಲೂಕು ಗಜೇಂದ್ರ ಗಡದಲ್ಲಿ ಪ್ರಥಮದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಎಷ್ಟು ಕೊಠಡಿಗಳ ನಿರ್ಮಾಣ ಮಾಡಲಾಗುತ್ತಿದೆ; ಕಾಮಗಾರಿ ಯಾವ ಹಂತದಲ್ಲಿದೆ;